# 6

# ಯೇಸು ಕಟ್ಟಿದ ಸಭೆ

ಒಬ್ಬ ವ್ಯಕ್ತಿಯು ಬಾಪ್ತಿಸ್ಮ ಹೊಂದಿದಾಗ ಕರ್ತನು ಅವನನ್ನು ತನ್ನ ಸಭೆಗೆ ಕೂಡಿಸುವನು ಎಂದು ಅಪೊಸ್ತಲರ ಕೃತ್ಯ 2ರಿಂದ ಕಲಿತು ಕೊಂಡಿದ್ದೇವೆ. ಅದೇ ಸತ್ಯವನ್ನು ಬೋಧಿಸುವ ಇನ್ನೊಂದು ವಾಕ್ಯವು 1 ಕೊರಿಂಥ 12:13, "ನಾವೆಲ್ಲರು ಒಂದೇ ದೇಹವಾಗುವದಕ್ಕಾಗಿ ... ಬಾಪ್ತಿಸ್ಮ ಮಾಡಿಸಿಕೊಂಡೆವು" ಎಂದು ಅದು ಹೇಳಿ ಸುತ್ತದೆ, ನಾವು ನೋಡುವಂತೆ "ದೇಹ" ಎಂಬ ಪದವು ಸಭೆಗೆ ಸಂಬಂಧಿಸಿದೆ.

ಯಾವುದು ನಿಶ್ಚಿತವಾಗಿ ಸಭೆಯಾಗಿದೆ? ಅನೇಕ ಜನರು "ಚರ್ಚ್" ಎಂಬ ಪದ ಕೇಳುವಾಗ, ಯಾವುದೋ ಸಭಾಪಂಗಡದ ಬಗ್ಗೆ ಯೋಚಿಸುತ್ತಾರೆ. ಈ ಅಧ್ಯಯನ ಅಂತ್ಯಗೊಳ್ಳುವದರೊಳಗಾಗಿ ಮಾನವ ನಿರ್ಮಿತ ಧಾರ್ಮಿಕ ಸಂಸ್ಥೆಗಳನ್ನು ನಿಮ್ಮ ಮನಸ್ಸಿನಿಂದ ತೆಗೆದು ಹಾಕಿರಿ. ಯೇಸು ಕಟ್ಟಿದ ಸಭೆಯ ಮೇಲೆ ನಾವು ಕೇಂದ್ರೀಕ ರಿಸಲು ಬಯಸುವೆವು (ಮತ್ತಾಯ 16:18).

## "ಚರ್ಚ್" (ಸಭೆ) ಎಂಬ ಪದದ ಅರ್ಥವೇನು?

ಎಕ್ಲೆಸಿಯಾ[1] ಎಂಬ ಗ್ರೀಕ ಪದದಿಂದ "ಚರ್ಚ್" ಎಂಬ ಪದವು ಭಾಷಾಂತರಿ ಸಲ್ಪಟ್ಟಿದೆ. "ಎಕ್ಲೆಸಿಯಾ" ಎಂಬುದು ಗ್ರೀಕ ಸಂಯುಕ್ತ ಪದವಾಗಿದ್ದು, "ಕರೆ" (*kaleo*) ಎಂಬ ಪದವನ್ನು "ಹೊರಗೆ" ("out" ಇಲ್ಲವೆ "out of") (*ek*) ಎಂಬ ಉಪಸರ್ಗಾವ್ಯ ದೊಂದಿಗೆ ಕೂಡಿಸಲ್ಪಟ್ಟಿರುತ್ತದೆ. ಎಕ್ಲೆಸಿಯಾ ಎಂಬುದರ ಅಕ್ಷರಶಃ ಅರ್ಥ "ಹೊರಗೆ ಕರೆಯಲ್ಪಟ್ಟವರು" ಎಂದು. ಯಾವುದೇ ಜನರ ಗುಂಪಿಗೆ[2] ಸಂಬಂಧಿಸಿ ಹೇಳಲು ಜಗತ್ತಿನಲ್ಲಿ ಈ ಪದ ಉಪಯೋಗಿಸಲ್ಪಟ್ಟಿತು. ಆದರೆ ಯೇಸು ಇದನ್ನು ವಿಶೇಷವಾದ ಪದವನ್ನಾಗಿ ಮಾಡಿದನು; ತಾನು ಸ್ಥಾಪಿಸಿದ ಸಭೆಯನ್ನು ಉದ್ದೇಶಿಸಿ ಹೇಳಲು ಉಪ ಯೋಗಿಸಿದಾಗ, ಪದವು ಲೋಕದೊಳಗಿಂದ "ಹೊರಗೆ ಕರೆಯಲ್ಪಟ್ಟಿದ್ದವರನ್ನು" ಹಾಗೂ ಯೇಸುವಿನೊಂದಿಗೆ ಹೊಸ ಸಂಬಂಧದೊಳಗೆ ಕರೆಯಲ್ಪಟ್ಟವರನ್ನು ಸೂಚಿಸುತ್ತದೆ.[3]

"ಚರ್ಚ್" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಕಡಿಮೆ ಪಕ್ಷ ಮೂರು ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ:

- "ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು" (ಮತ್ತಾಯ 16:18) ಎಂದು ಯೇಸು ಹೇಳಿದಾಗ ಆತನು ಈ ಪದವನ್ನು ಸಾರ್ವತ್ರಿಕ ಅರ್ಥದಲ್ಲಿ ಉಪಯೋಗಿಸಿದನು. ಸಾರ್ವತ್ರಿಕ ಅರ್ಥದಲ್ಲಿ ಸಭೆಯನ್ನು ಸಂಬಂಧಿಸಿ ಹೇಳುವಾಗ ಯಾವಾಗಲೂ ಏಕವಚನವು ಉಪಯೋಗಿಸಲ್ಪಟ್ಟಿರುವುದು, ಯಾಕಂದರೆ ಒಂದೇ ಒಂದು ಇರುವುದು.[4] ಈ ಸಭೆಗೆ ಕರ್ತನು ಬಾಪ್ತಿಸ್ಮ ಹೊಂದಿದವರನ್ನು ಕೂಡಿಸುತ್ತಾನೆ.
- ಎಕ್ಲೆಸಿಯಾ ಎಂಬುದು ಸ್ಥಳಿಕ ಸಭೆಯನ್ನು ಸೂಚಿಸಲು ಸ್ಥಳಿಕ

ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ, "ಗಲಾತ್ಯದ ಸಭೆಗಳು" ಹಾಗೂ "ಆಸಿಯಾದ ಸಭೆಗಳು" (1 ಕೊರಿಂಥ 16:1, 19) ಎಂದು ಓದುತ್ತೇವೆ. ಒಬ್ಬನು ಬಾಪ್ತಿಸ್ಮ ಹೊಂದುವಾಗ ಅವನು ಸಾರ್ವತ್ರಿಕ ಸಭೆಗೆ ಸದಸ್ಯನಾಗುತ್ತಾನೆ. ಆದರೆ ಅವನು ಒಂದು ಸ್ಥಳಿಕ ಸಭೆಯ[5] ಭಾಗವಾಗಿ ಕಾರ್ಯ ಮಾಡುವ ಮತ್ತು ಆರಾಧಿಸುವ ಅಗತ್ಯತೆಯಿರುವುದು.

- ಆಗಾಗಿ ಹೊಸ ಒಡಂಬಡಿಕೆಯು "ಎಕ್ಲೆಸಿಯಾ" ಎಂಬ ಪದವನ್ನು ಒಂದು ಅಸೆಂಬ್ಲಿಯನ್ನು - ಆರಾಧನೆಯ ಉದ್ದೇಶಕ್ಕಾಗಿ ಕ್ರೈಸ್ತರು ಕೂಡಿ ಬರುವದನ್ನು ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ.[6] ಉದಾಹರಣೆಯಾಗಿ, 1 ಕೊರಿಂಥ 14:19ರಲ್ಲಿ "ಸಭೆಯಲ್ಲಿ" ಬೋಧಿಸುವದರ ಬಗ್ಗೆ ಪೌಲನು ಮಾತನಾಡಿದನು, ಅಸೆಂಬ್ಲಿಯಲ್ಲಿ (ನೆರೆದ ಸಂಘದಲ್ಲಿ) ಬೋಧಿಸುವದನ್ನು ಸಂಬಂಧಿಸಿ ಅವನು ಹೇಳಿದನು ( 1 ಕೊರಿಂಥ 14:23; ಓದಿರಿ 1 ಕೊರಿಂಥ 11:18 ನೋಡಿರಿ).

## ಚರ್ಚ್ ಏನಾಗಿರುವುದು?

ಆಗಾಗ ಜನರು ಒಂದು ಕಟ್ಟಡವನ್ನು ತೋರಿಸಿ "ಅಲ್ಲಿ ಚರ್ಚ್ ಇದೆ" ಇಲ್ಲವೇ "ಅದು ನನ್ನ ಚರ್ಚ್" ಎಂದು ಹೇಳುತ್ತಾರೆ. ನಾವು ಇಷ್ಟರವರೆಗೆ ಹೇಳಿದ್ದರಿಂದ ಸಭೆಯು (ಚರ್ಚ್) ಒಂದು ಕಟ್ಟಡವಾಗಿರುವದಿಲ್ಲ ಎಂಬುದು ಸ್ಪಷ್ಟವಾಗಿರಬೇಕು.[7] "ಸಭೆಯು ಎಂದೂ ಒಂದು ಸ್ಥಳವಾಗಿರುವದಿಲ್ಲ. ಆದರೆ ಯಾವಾಗಲೂ ಒಂದು ಜನಾಂಗವಾಗಿದೆ" ಎಂದು ಯಾರೋ ಒಬ್ಬರು ಹೇಳಿದ್ದಾರೆ.

"ಸಭೆ" (ಚರ್ಚ್) ಎಂಬ ಪದವನ್ನು ನಮ್ಮ ಅಧ್ಯಯನಗಳಲ್ಲಿ ಆಗಾಗ ಉಪಯೋಗಿಸಿದ್ದೇನೆ. ನಾನು ಹಾಗೆ ಮಾಡುವಾಗ *ಯೇಸುವಿನ ರಕ್ತದಿಂದ ರಕ್ಷಿಸಲ್ಪಟ್ಟವರನ್ನು ಸಂಬಂಧಿಸಿ ಹೇಳುತ್ತೇನೆ.*

ಚರ್ಚ್ (ಸಭೆ) = ರಕ್ಷಿಸಲ್ಪಟ್ಟವರು

ಕೆಲವರು ತಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ನಂಬುವರು ಆದಾಗ್ಯೂ ತಾವು ಯಾವುದೇ ಸಭೆಯ ಸದಸ್ಯರಲ್ಲ ಎಂದು ಒತ್ತಿ ಹೇಳುವರು. ಅವರು ರಕ್ಷಿಸಲ್ಪಟ್ಟಿದ್ದರೆ, ಅವರು ಸಭೆಯ ಸದಸ್ಯರಾಗಿರುವರು - ಯಾಕಂದರೆ, ನಾವು ನೋಡಿದ ಹಾಗೆ, ರಕ್ಷಿಸಲ್ಪಟ್ಟವರನ್ನು - ಕರ್ತನು ಸಭೆಗೆ ಸೇರಿಸುವನು (ಅಪೊಸ್ತಲರ ಕೃತ್ಯ 2:47; KJV).[8] ರಕ್ಷಿಸಲ್ಪಟ್ಟವರೆಲ್ಲರನ್ನು ಕರ್ತನು ಸಭೆಗೆ ಸೇರಿಸುವದರಿಂದ, ಸಭೆಯ ಹೊರಗೆ ರಕ್ಷಿಸಲ್ಪಟ್ಟವರು ಯಾರೂ ಇರುವದಿಲ್ಲ.

ಈ ಸತ್ಯವು ಹೊಸ ಒಡಂಬಡಿಕೆಯಲ್ಲಿ ಬೋಧಿಸಲ್ಪಟ್ಟಿದೆ "ದೇವರು ಸ್ವರಕ್ತದಿಂದ ಸಂಪಾದಿಸಿ ಕೊಂಡ ಸಭೆಯನ್ನು"[9] ಕಾಯುವದಕ್ಕಾಗಿ ಎಚ್ಚರಿಕೆಯಾಗಿರಿ (ಅಪೊಸ್ತಲರ ಕೃತ್ಯ 20:28) ಎಂದು ಪೌಲನು ಹಿರಿಯರ ಗುಂಪಿಗೆ ಹೇಳಿದನು. ಕ್ರಿಸ್ತನು ಎಲ್ಲರಿಗೋಸ್ಕರ ಸತ್ತನು (2 ಕೊರಿಂಥ 5:14, 15). ಆದರೆ ಆತನಿಗೆ ಸಮರ್ಪಿಸಿ ಕೊಳ್ಳುವವರು ಮಾತ್ರವೇ ಆತನ ಮರಣದ ಲಾಭಗಳನ್ನು ಹೊಂದಿ

ಕೊಳ್ಳುವರು. ಕ್ರಿಸ್ತನ ರಕ್ತದಿಂದ ನಿಜವಾಗಿಯೂ "ಸಂಪಾದಿಸಲ್ಪಟ್ಟವರು" ಮಾತ್ರವೇ ಸಭೆಯಲ್ಲಿರುವವರಾಗಿರುತ್ತಾರೆ.

"ಕ್ರಿಸ್ತನು ಸಭೆಗೆ ಶಿರಸ್ಸಾಗಿದ್ದಾನೆ, ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ ... ಅದನ್ನು ಪ್ರೀತಿಸಿ ಅದಕ್ಕಾಗಿ ತನ್ನನ್ನು ತಾನೇ ಒಪ್ಪಿಸಿಕೊಟ್ಟನು" ಎಂದು ಎಫೆಸ 5:23, 25ರಲ್ಲಿ ಪೌಲನು ಎಫೆಸದವರಿಗೆ ಬರೆದನು. ನೀನು ಮತ್ತು ನಾನು ರಕ್ಷಿಸಲ್ಪಡಲು ಬಯಸಿದರೆ, ಕ್ರಿಸ್ತನು ಪ್ರೀತಿಸುತ್ತಿದ್ದಂಥದರ ಭಾಗವು ನಾವಾಗಿರತಕ್ಕದ್ದು. ಕ್ರಿಸ್ತನು ತನ್ನನ್ನು ಸಮರ್ಪಿಸಿಕೊಂಡ ಭಾಗವು ನಾವಾಗಿರತಕ್ಕದ್ದು. ಕ್ರಿಸ್ತನು ರಕ್ಷಿಸುವಂಥದ್ದರ ಭಾಗವು ನಾವಾಗಿರತಕ್ಕದ್ದು. ನಾವು ಕರ್ತನ ಸಭೆಯ ಭಾಗವಾಗಿರತಕ್ಕದ್ದೆಂದು ಬೇರೆ ಮಾತುಗಳಲ್ಲಿ ಹೇಳಬಹುದು.

## ಜನರು ಏನೆಂದು ಕರೆಯಲ್ಪಟ್ಟಿದ್ದಾರೆ?

ಹೊಸ ಒಡಂಬಡಿಕೆಯಲ್ಲಿ "ಸಭೆ" ಎಂಬ ಪದವು ದೇವರ ಜನರಿಗೆ ಬಹಳ ಸಾಮಾನ್ಯವಾದ ಹೆಸರಾಗಿದೆ. ಆದರೆ ಇತರ ಮಾತುಗಳೂ ಸಹ ಉಪಯೋಗಿಸಲ್ಪಟ್ಟಿವೆ.[10] ಸಭೆಯ ಬಗೆಗಿನ ನಮ್ಮ ತಿಳುವಳಿಗೆ ಪ್ರತಿಯೊಂದೂ ಕೂಡಿಸುತ್ತದೆ.

**ದೇಹ**

ಕೆಲವು ಸಲ ಸಭೆಯು "ದೇಹ" ಎಂದು ಕರೆಯಲ್ಪಟ್ಟಿದೆ. ಎಫೆಸ 1:22, 23ರಲ್ಲಿ ಪೌಲನು, "ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು [ಅಂದರೆ, ಕ್ರಿಸ್ತನನ್ನು] ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. *ಸಭೆಯು ಆತನ ದೇಹವಾಗಿದೆ;* ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ"[11] ಎಂದು ಹೇಳಿದ್ದಾನೆ.

ಚರ್ಚ್ = ದೇಹ

ಕೊಲಸ್ಸೆ 1:18ರಲ್ಲಿ ಪೌಲನು, ಕ್ರಿಸ್ತನು "*ಸಭೆಗೆ, ದೇಹದ* ಶಿರಸ್ಸೂ ಆಗಿದ್ದಾನೆ"[12] ಎಂದು ಬರೆದಿದ್ದಾನೆ.

ದೇಹ = ಚರ್ಚ್

"ದೇಹ" ಎಂಬ ಮಾತು ಕೆಲವೊಂದು ರೀತಿಯಲ್ಲಿ ಸಭೆಯು ಮಾನವ ದೇಹದ ರೀತಿಯಲ್ಲಿದೆ ಎಂದು ನಮಗೆ ಹೇಳುತ್ತದೆ. ಕ್ರಿಸ್ತನು ದೇಹದ ಶಿರಸ್ಸಾಗಿದ್ದಾನೆ (ಎಫೆಸ 1:22, 23; ಕೊಲಸ್ಸೆ 1:18), ಹಾಗೂ ಕ್ರೈಸ್ತರು ದೇಹದ ವೈಯಕ್ತಿಕ ಸದಸ್ಯರಾಗಿದ್ದಾರೆ (ರೋಮಾಪುರ 12:4, 5; 1 ಕೊರಿಂಥ 12:12, 18-27). ಮಾನವ ದೇಹಕ್ಕೆ ಅನೇಕ ಅಂಗಗಳಿವೆ (ಭುಜಗಳು, ಕಾಲುಗಳು, ಕೈಗಳು ಇತ್ಯಾದಿ). ಪ್ರತಿಯೊಂದಕ್ಕೆ ಭಿನ್ನವಾದ ಕಾರ್ಯಗಳಿವೆ. ಅದೇ ರೀತಿಯಲ್ಲಿ ಕ್ರಿಸ್ತನ ದೇಹಕ್ಕೆ ಅನೇಕ ಅಂಗಗಳಿದ್ದು ಪ್ರತಿಯೊಂದು ವಿಶೇಷ ಕಾರ್ಯವನ್ನು ಹೊಂದಿದೆ ಮತ್ತು ಪ್ರತಿಯೊಂದೂ ಮಹತ್ವದ್ದಾಗಿದೆ.

**ರಾಜ್ಯ**

ಸಭೆಯು "ರಾಜ್ಯ" ಎಂದೂ ಕರೆಯಲ್ಪಟ್ಟಿದೆ. "ಈ ಬಂಡೆಯ ಮೇಲೆ ನನ್ನ

ಸಬೆಯನ್ನು ಕಟ್ಟುವೆನು'' ಎಂದು ಯೇಸು ಹೇಳಿದನಂತರ ಆತನು ಪೇತ್ರನಿಗೆ, "ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು''[13] (ಮತ್ತಾಯ 16:18, 19ಎ) ಎಂದು ಹೇಳಿದನು. "ಸಭೆಯು'' ಮತ್ತು "ರಾಜ್ಯವು'' ಎಂಬ ಮಾತುಗಳನ್ನು ಯೇಸು ಅದಲುಬದಲಾಗುವ ರೀತಿಯಲ್ಲಿ ಉಪಯೋಗಿಸಿದನು.

ಚರ್ಚ್ = ರಾಜ್ಯ

" ... ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು'' (ಕೊಲಸ್ಸೆ 1:13) ಎಂದು ಕೊಲೊಸ್ಸೆಯಲ್ಲಿಯ ಸಭೆಗೆ ಪೌಲನು ಹೇಳಿದನು.

"ರಾಜ್ಯ'' ಎಂಬ ಮಾತು ಸಭೆಯಲ್ಲಿರುವವರು ಅರಸ ಯೇಸುವಿಗೆ ಅಧೀನರಾಗಿರುವರು ಎಂದು ನಮಗೆ ಹೇಳುತ್ತದೆ. ಈಗ ಯೇಸುವು ಪರಲೋಕದಲ್ಲಿ ತನ್ನ ಸಿಂಹಾಸನದಲ್ಲಿ ಕುಳಿತು ಆಳುತ್ತಿದ್ದಾನೆ (ಅಪೊಸ್ತಲರ ಕೃತ್ಯ 2:29-36) ಹಾಗೂ ಆತನು "ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ ಕೆಳಗೆ ಹಾಕಿಕೊಳ್ಳುವ ತನಕ ರಾಜ್ಯವನ್ನಾಳುವದು ಅವಶ್ಯ. ಮರಣವು ಕಡೇ ಶತ್ರುವಾಗಿ ನಿವೃತ್ತಿಯಾಗುವುದು'' (1 ಕೊರಿಂಥ 15:25, 26).

**ಕುಟುಂಬ**

ಸಭೆಗಾಗಿ ನನಗೆ ಮೆಚ್ಚಿಕೆಯಾದ ಮಾತುಗಳಲ್ಲಿ ಒಂದು ದೇವರ "ಕುಟುಂಬ.'' "ಜೀವಿಸುವ ದೇವರ ಸಭೆಯಾಗಿರುವ ದೇವರ ಕುಟುಂಬದಲ್ಲಿ'' ನಾವು ಹೇಗೆ ವರ್ತಿಸ ಬೇಕೆಂಬುದನ್ನು ಕ್ರೈಸ್ತರು ತಿಳಿದು ಕೊಳ್ಳುವಂತೆ ತಾನು ಬರೆಯು ತ್ತಿದ್ದೇನೆ ಎಂದು ಪೌಲನು ತಿಮೊಥೆಯನಿಗೆ ಹೇಳಿದನು (1 ತಿಮೊಥ 3:15).[14] ಈ ವಾಕ್ಯದಲ್ಲಿ "ಮನೆಯವರು'' ಎಂಬುದರ ಅರ್ಥ "ಕುಟುಂಬ.''[15] ನನ್ನ ಪಂಡಿತ ಸ್ನೇಹಿತ Hugo McCord ಈ ವಚನವನ್ನು ಹೀಗೆ ಭಾಷಾಂತರಿಸಿದ್ದಾರೆ, "ನೀವು ದೇವರ ಕುಟುಂಬದಲ್ಲಿ ಹೇಗೆ ಪ್ರವರ್ತಿಸಬೇಕೆಂಬುದನ್ನು ನೀವು ತಿಳಿದು ಕೊಳ್ಳತಕ್ಕದ್ದು.''[16]

ಚರ್ಚ್ = ಕುಟುಂಬ

ಈ ಆತ್ಮಿಕ ಕುಟುಂಬದಲ್ಲಿ, ದೇವರು ತಂದೆಯಾಗಿದ್ದಾನೆ (ಮತ್ತಾಯ 6:9), ಯೇಸುವು ಹಿರಿಯ ಅಣ್ಣನಾಗಿದ್ದಾನೆ (ಇಬ್ರಿಯ 21:11, 12), ಮತ್ತು ಕ್ರೈಸ್ತರು ಸಹೋದರರೂ ಸಹೋದರಿಯರೂ ಆಗಿದ್ದಾರೆ (ಯಾಕೋಬ 2:15). ನನ್ನ ದೈಹಿಕ ಕುಟುಂಬ ನನಗೆ ಅಮೂಲ್ಯವಾದದ್ದು. ಆದರೆ ದೇವರ ಆತ್ಮಿಕ ಕುಟುಂಬ ಇನ್ನೂ ಹೆಚ್ಚು ಅಮೂಲ್ಯವಾದದ್ದಾಗಿದೆ.

"ಸಭೆ,'' "ದೇಹ,'' "ರಾಜ್ಯ,'' ಹಾಗೂ "ಕುಟುಂಬ'' ಎಂಬ ಪದಗಳು ಒಂದಕ್ಕೊಂದು ಪರ್ಯಾಯ ಪದಗಳಲ್ಲ, ಆದರೆ ಜನರ ಒಂದೇ ತರದ ಗುಂಪನ್ನು ನೋಡಿದ ನಾಲ್ಕು ಭಿನ್ನವಾದ ಮಾರ್ಗಗಳಾಗಿವೆ. ಉದಾಹರಣೆಯಾಗಿ: ನಾನು ಒಬ್ಬ ತಂದೆ, ಒಬ್ಬ ಗಂಡ, ಒಬ್ಬ ಮಗ ಹಾಗೂ ಒಬ್ಬ ಸಹೋದರ. "ತಂದೆ,'' "ಗಂಡ,'' "ಮಗ,'' ಮತ್ತು "ಸಹೋದರ'' ಎಂಬ ಮಾತುಗಳು ಸಮಾನಾರ್ಥವಾದವುಗಳಲ್ಲ, ಆದರೆ ಅವೆಲ್ಲವೂ

ನನಗೆ ಅನ್ವಯಿಸುತ್ತವೆ. ನಾನು ಅನುಭವಿಸುವ ವಿವಿಧ ಸಂಬಂಧವನ್ನು ಅವು ಸೂಚಿಸುತ್ತವೆ. ಹಾಗೆಯೇ ಸಭೆಗೆ ಸಂಬಂಧಿಸಿ ಉಪಯೋಗಿಸಿದ ನಾಲ್ಕು ಮಾತುಗಳು ವಿವಿಧ ಆತ್ಮಿಕ ಸಂಬಂಧಗಳನ್ನು ಸೂಚಿಸುತ್ತವೆ:

- ಜಗತ್ತಿಗೆ ಸಂಬಂಧಿಸಿ ಕ್ರೈಸ್ತರು ಯೇಸುವಿನಲ್ಲಿ ಲೋಕದೊಳಗಿಂದ ಹೊರಗೆ ಕರೆಯಲ್ಪಟ್ಟವರು - ಸಭೆಯಾಗಿದ್ದಾರೆ.
- ಒಬ್ಬರಿಗೊಬ್ಬರ ಸಂಬಂಧದಲ್ಲಿ ಸಭೆಯು ದೇಹವಾಗಿದೆ. ಸದಸ್ಯರು ಇಡೀಯಾಗಿ ಕಾರ್ಯಮಾಡಬೇಕು, ಒಬ್ಬರಿಗೊಬ್ಬರು ಜೋಪಾಸನೆ ಮಾಡಬೇಕು.
- ಯೇಸುವಿಗೆ ಸಂಬಂಧಿಸಿ, ಸಭೆಯ ಸದಸ್ಯರು ಆತನ ರಾಜ್ಯವಾಗಿದ್ದಾರೆ - ಆತನಿಗೆ ತಮ್ಮ ಹೃದಯಗಳನ್ನೂ ಜೀವಿತಗಳನ್ನೂ ಸಮರ್ಪಿಸಿದವರಾಗಿದ್ದಾರೆ.
- ದೇವರಿಗೆ ಸಂಬಂಧಿಸಿ, ಕ್ರೈಸ್ತರು ಆತನ ಕುಟುಂಬವಾಗಿದ್ದಾರೆ. ಆತನ ಪ್ರೀತಿಯ ಮಕ್ಕಳಾಗಿದ್ದಾರೆ.

## ಮುಕ್ತಾಯ

ನಾವು ಅಧ್ಯಯನ ಮಾಡಿದ್ದರಿಂದ, ಕರ್ತನ ಸಭೆಯ ಭಾಗವಾಗಿರುವುದು ಅಗತ್ಯವಾಗಿದೆ. ನಾವು ರಕ್ಷಿಸಲ್ಪಡಬೇಕೆಂದು ಅಪೇಕ್ಷಿಸಿದರೆ, ಕರ್ತನ ಸಭೆಯ ಸದಸ್ಯನಾಗಿರುವುದು ಅತೀ ಅವಶ್ಯವಾಗಿದೆ. ಹಾಗಾದರೆ ಮುಖ್ಯವಾದ ಪ್ರಶ್ನೆಯು, "ನೀನು ಆತನ ಸಭೆಯ ಸದಸ್ಯನಾಗಿರುವೆಯೋ?" ಎಂಬುದು.

---

ಟಿಪ್ಪಣಿಗಳು

[1]"ಎಕ್ಲೆಸಿಯಾಸ್ಟಿಕಲ್" ಎಂಬಂಥ ಪದವು ಗ್ರೀಕ ಪದವನ್ನು ಪ್ರತಿಬಿಂಬಿಸುತ್ತದೆ. [2]ಈ ಅರ್ಥದಲ್ಲಿ ಅದು (ಅಪೊಸ್ತಲರ ಕೃತ್ಯ 19:30, 32, 33, 39, 41ರಲ್ಲಿ) ಉಪಯೋಗಿಸಲ್ಪಟ್ಟಿದೆ. [3]ಸುವಾರ್ತೆಯಿಂದ ನಾವು ಕರೆಯಲ್ಪಟ್ಟಿದ್ದೇವೆ (2 ಥೆಸಲೋನಿಕ 2:14) ಹಾಗೂ ವಿಶ್ವಾಸ ಮತ್ತು ವಿಧೇಯತೆಯ ಮುಖಾಂತರ ನಾವು ಆ ಕರೆಗೆ ಉತ್ತರ ಕೊಡತಕ್ಕದ್ದು. [4]"ಒಂದೇ ದೇಹ" ಇರುವದೆಂದು ಎಫೆಸ 4:4 ಹೇಳುತ್ತದೆ; ಈ ಪಾಠದಲ್ಲಿ ನಾವು ಅನಂತರದಲ್ಲಿ ಅಧ್ಯಯನ ಮಾಡುವಂತೆ ಆ ದೇಹವು ಸಭೆಯಾಗಿರುವುದು (ಎಫೆಸ 1:22, 23). [5]ಹೊಸ ಒಡಂಬಡಿಕೆಯಲ್ಲಿಯ ಪ್ರತಿಕೆಗಳು ಎಲ್ಲಾ ಸಭೆಗಳಿಗಾಗಿ ಉದ್ದೇಶಿಸಲ್ಪಟ್ಟಿರುವವು. ಅವು ಸ್ಥಳಿಕ ಸಬೆಗಳಿಗೆ ಯಾವಾಗಲೂ ಸಂಬೋಧಿಸಲ್ಪಟ್ಟಿವೆ. ಸ್ಥಳಿಕ ಸಭೆಗಳು ಸಾರ್ವತ್ರಿಕ ಸಭೆಯ ಸಾಮಾನ್ಯ ಪ್ರಕಟನೆಯಾಗಿವೆ. [6]"ಚರ್ಚ್‌ಗೆ ಹೋಗುವುದು" ಎಂಬುದನ್ನು ಉಪಯೋಗಿಸುವ ಪವಿತ್ರ ಗ್ರಂಥದ ಕೇವಲ ಮಾರ್ಗವು ದೇವರನ್ನು ಆರಾಧಿಸುವದಕ್ಕಾಗಿ ಭಕ್ತರ ಅಸೆಂಬ್ಲಿಗೆ ಹೋಗು ವುದು ಎಂದರ್ಥ ಕೊಡುವದರಲ್ಲಿದೆ. [7]ಸಭೆಯ ಕಟ್ಟಡವು ಸಭೆಯು ತನ್ನ ಸೇವೆಯನ್ನು ನೆರವೇರಿಸಲು ಸಹಾಯ ಮಾಡುವ ಸಾಧನವಾಗಬಹುದು. ಆದರೆ ಕಟ್ಟಡವು ಸಭೆಯಾಗಿರುವದಿಲ್ಲ. [8]"ಏಳು, ಬಾಪ್ತಿಸ್ಮ ಮಾಡಿಸಿಕೋ" ಎಂಬ ಪಾಠದಲ್ಲಿಯ ಅಪೊಸ್ತಲರ ಕೃತ್ಯ 2:38, 41 ಮತ್ತು 47ರ ಮೇಲಿನ ಟಿಪ್ಪಣಿಗಳನ್ನು ನೋಡಿರಿ. [9]ಇದು ಕುಮಾರನಾದ ದೇವರು "ತನ್ನ ಸ್ವಂತ ರಕ್ತದಿಂದ" ಸಬೆಯನ್ನು ಕೊಂಡು ಕೊಂಡವನು ಯೇಸುವು. [10]ಯೇಸುವಿನ ರಾಜ್ಯದ ಸಾಮ್ಯಗಳಲ್ಲಿ, ರಾಜ್ಯ/ಸಭೆಯು ಹೊಲಕ್ಕೆ, ದ್ರಾಕ್ಷೆ ತೋಟಕ್ಕೆ ಮತ್ತು ಇತರ ಪರಿಚಿತ ಸಂಗತಿಗಳಿಗೆ ಹೋಲಿಸಲ್ಪಟ್ಟಿವೆ. ಹೀಗೆ ಪದಗಳ ಪಟ್ಟಿಯನ್ನು ವಿಸ್ತರಿಸಬಹುದು.

[11]ಸ್ಪಷ್ಟನೆ ನನ್ನದು. [12]ಸ್ಪಷ್ಟನೆ ನನ್ನದು. [13]"ಪರಲೋಕ ರಾಜ್ಯದ ಬೀಗದ ಕೈಗಳನ್ನು"

ಪೇತ್ರನಿಗೆ ಕೊಡುವ ವಾಗ್ದಾನವು ಪೇತ್ರನು ಇತರ ಅಪೊಸ್ತಲರಿಗಿಂತ ಹೆಚ್ಚು ಮಹತ್ವವುಳ್ಳವನಾಗಿರುವನೆಂಬುದರ ಅರ್ಥವಾಗುವದಿಲ್ಲ. ಯೇಸು ಯಾರಾಗಿದ್ದನೆಂಬದನ್ನು ಸ್ವೀಕರಿಸುವದರಲ್ಲಿ ಪೇತ್ರನು ಪ್ರಥಮನಾಗಿರುವದರಿಂದ ಬಹುಮಾನವಾಗಿ, ತಮ್ಮ ಪಾಪಗಳ ಕ್ಷಮಾಪಣೆಯನ್ನು ಸ್ವೀಕರಿಸುವದು ಹೇಗೆ ಎಂಬುದನ್ನು ಜನರಿಗೆ ಹೇಳುವದರಲ್ಲಿ ಪ್ರಥಮನಾಗಿದ್ದನು (ಅಪೊಸ್ತಲರ ಕೃತ್ಯ 2:14-41). ರಾಜ್ಯದೊಳಗೆ (ಸಭೆಯೊಳಗೆ) ಜನರು ಬರುವಂತೆ "ಬೀಗದ ಕೈಗಳನ್ನು" ಉಪಯೋಗಿಸುವದರಲ್ಲಿ ಪೇತ್ರನು ಮೊದಲಿಗನು. ಆದರೆ ಅವನೊಬ್ಬನೇ ಆಗಿರಲಿಲ್ಲ. (ಉದಾಹರಣೆಯಾಗಿ, ಅಪೊಸ್ತಲರ ಕೃತ್ಯ 22:16 ನೋಡಿರಿ.) [14]ದೇವರ ಕುಟುಂಬಕ್ಕೆ ಸಂಬಂಧಿಸಿದ ಇತರ ವಾಕ್ಯಗಳು: ಎಫೆಸ 2:19 ಹಾಗೂ 1 ಪೇತ್ರ 4:17 [15]ಹಿರಿಯರ ಮನೆತನ (ಅವನ ಕುಟುಂಬ) ಮತ್ತು ದೇವರ ಮನೆತನ (ದೇವರ ಕುಟುಂಬ, ಸಭೆ) ಮಧ್ಯದಲ್ಲಿ ಹೋಲಿಕೆಯು ಮಾಡಲ್ಪಟ್ಟಿದೆ (1 ತಿಮೊಥೆ 3:4, 5, 15 ನೋಡಿರಿ). [16]Hugo McCord, *McCord's New Testament Translation of the Everlasting Gospel* (Henderson, Tenn.: Freed-Hardeman College, 1988), 205.

© 2009 Truth for Today